
# ಕೆಪಿಎಸ್‌ಸಿ ಮತ್ತೊಂದು ಹಗರಣ

## ಪ್ರಶ್ನೆಪತ್ರಿಕೆ ಸೋರಿಕೆಗೆ ಕಠಿಣ ಶಿಕ್ಷೆಯಾಗಲಿ

ಕರ್ನಾಟಕ ಲೋಕಸೇವಾ ಆಯೋಗ(ಕೆಪಿಎಸ್‌ಸಿ) ಮತ್ತೊಮ್ಮೆ 'ಲೋಪಸೇವಾ' ಎಂಬ ವಿಶೇಷಣವನ್ನು ನಿಜಗೊಳಿಸಲು ಹೊರಟಂತೆ ಕಾಣುತ್ತದೆ. ಭಾನುವಾರ ನಡೆಯಬೇಕಿದ್ದ ಪ್ರಥಮ ದರ್ಜೆ ಸಹಾಯಕ ಹುದ್ದೆ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದು, ಲೋಕಸೇವಾ ಆಯೋಗದ ಸಿಬ್ಬಂದಿಯೇ ಈ ಸೋರಿಕೆಯ ಸೂತ್ರಧಾರರಾಗಿರುವುದು ಬೆಳಕಿಗೆ ಬಂದಿದೆ. ಹಲವಾರು ಕರ್ಮಕಾಂಡಗಳ ಮೂಲಕ ಜನರ ನಂಬಿಕೆ ಕಳೆದುಕೊಂಡಿರುವ ಕೆಪಿಎಸ್‌ಸಿಗೆ ಮತ್ತೊಂದು ಕಳಂಕ ಇದು. ಲಕ್ಷಾಂತರ ಮಂದಿ ಪರೀಕ್ಷಾರ್ಥಿಗಳ ಅಧ್ಯಯನ, ಮಾನವಶ್ರಮ, ಸಮಯವನ್ನೆಲ್ಲ ಹಾಳು ಮಾಡಿದ, ಸರಕಾರದ ಸಂಪನ್ಮೂಲವನ್ನೂ ದಂಡ ಮಾಡಿದ ಈ ಸೋರಿಕೆ ಸೂತ್ರಧಾರಿಗಳಿಗೆ ಅವರೆಷ್ಟೇ ಪ್ರಭಾವಿಗಳಾಗಿದ್ದರೂ ಕಠಿಣ ಶಿಕ್ಷೆಯಾಗಬೇಕು.

ಸರಕಾರ ನಡೆಸುತ್ತಿರುವ ಪರೀಕ್ಷೆಗಳು ಸೋರಿಕೆಗೆ ಯಾಕೆ ಇಷ್ಟೊಂದು ಪ್ರಶಸ್ತ ತಾಣಗಳಾಗಿವೆ ಎಂಬುದರ ಅಧ್ಯಯನ ಆಗಬೇಕು. 2018ರಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಪರೀಕ್ಷೆ ಹಾಗೂ 2016ರಲ್ಲಿ ದ್ವಿತೀಯ ಪಿಯು ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಸೋರಿಕೆಯಾಗಿದ್ದವು. ಕೆಲವು ಪ್ರಭಾವಿ ಸರಕಾರಿ ಸಿಬ್ಬಂದಿ, ಮಧ್ಯವರ್ತಿಗಳು ಹಾಗೂ ಕೆಲ ಹಣವಂತ ಅಭ್ಯರ್ಥಿಗಳ ಅಪವಿತ್ರ ಮೈತ್ರಿಯ ಕಾರಣದಿಂದ ಇಂಥ ಹಗರಣಗಳು ಸಂಭವಿಸುತ್ತಿವೆ. ಹಾಗಿದ್ದರೆ ಸರಕಾರಿ ಕಚೇರಿಯಲ್ಲಿ ಯಾರನ್ನು ನಂಬಬೇಕು, ಇಲ್ಲಿ ಪಾರದರ್ಶಕತೆಗೆ ಬೆಲೆಯೇನು.



ಹೀಗೆ ಅಡ್ಡದಾರಿಯಿಂದ ಸರಕಾರಿ ಕೆಲಸ ಹಿಡಿದವರು ಸರಕಾರದ ಘೋಷಣೆಯಾದ 'ಸತ್ಯಮೇವ ಜಯತೇ' ಎಂಬುದನ್ನು ಎಷ್ಟರ ಮಟ್ಟಿಗೆ ಪಾಲಿಸುತ್ತಾರೆ, ಇತರರು ಕೆಲಸ ಮಾಡಿಕೊಳ್ಳಲು ಲಂಚ ತೆರಬೇಕಾದ ಅನಿವಾರ್ಯತೆ ಸೃಷ್ಟಿಯಾಗುವುದು ಹೀಗೇ ಅಲ್ಲವೇ ಮುಂತಾದ ಪ್ರಶ್ನೆಗಳು ಇಲ್ಲಿ ಸೃಷ್ಟಿಯಾಗುತ್ತವೆ.

ಕೆಪಿಎಸ್‌ಸಿ 'ಅದಕ್ಷತೆಗೆ ಇನ್ನೊಂದು ಹೆಸರು' ಎಂದೇ ಕುಖ್ಯಾತವಾಗಿದೆ. ಪ್ರಾಮಾಣಿಕತೆ ಹಾಗೂ ಜ್ಯೇಷ್ಠತೆ ಆಧರಿಸಿ ನೇಮಕಾತಿ ಮಾಡಬೇಕಾದ ಕೆಪಿಎಸ್‌ಸಿ ತಾನೇ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಅಕ್ರಮಗಳ ನೆಲೆಯಾದಾಗ ಸರಕಾರಿ ಸೇವಾ ವಲಯಕ್ಕೆ ಲಕ್ವ ಹೊಡೆಯುವುದು ಸಹಜ. ಆಯೋಗಕ್ಕೆ ಅಕ್ರಮಗಳ ಕೂಪವೆಂಬ ಹಣೆಪಟ್ಟಿ ತಗುಲಿ ದಶಕಗಳೇ ಕಳೆದರೂ ಅದನ್ನು ನಿವಾರಿಸುವ ಯತ್ನ ನಡೆಯುತ್ತಿಲ್ಲ. ಹೀಗಾಗಿ ಅರ್ಹ ಉದ್ಯೋಗಾಕಾಂಕ್ಷಿಗಳು ಇದರ ಹೊರಗೇ ಇದ್ದಾರೆ. ಕೆಪಿಎಸ್‌ಸಿ ಆಯಾ ಕಾಲದ ಸರಕಾರಗಳ ಮರ್ಜಿಗೆ ತಕ್ಕಂತೆ ಕುಣಿಯುತ್ತ ಬಂದಿದೆ. ಪ್ರತಿ ಸರಕಾರವೂ ತನ್ನ ಇಚ್ಛೆಗೆ ತಕ್ಕಂತೆ ನೇಮಕ, ರದ್ದು, ವರ್ಗ ಇತ್ಯಾದಿಗಳನ್ನು ಮಾಡುತ್ತ ನೇಮಕ ಪ್ರಕ್ರಿಯೆಯನ್ನು ಕಿರುಬೆರಳಲ್ಲಿ ಕುಣಿಸುತ್ತ ಕೆಪಿಎಸ್‌ಸಿಯ ಉದ್ದೇಶವನ್ನು ಹಾಳುಗೆಡವಿವೆ. ಹತ್ತಾರು ವರ್ಷಗಳಿಂದ ಆಯೋಗದಲ್ಲಿ ಬೇರುಬಿಟ್ಟಿರುವ ಸಿಬ್ಬಂದಿ, ತಮ್ಮನ್ನು ಯಾರೂ ಅಲ್ಲಾಡಿಸಲಾಗದು ಎಂದು ಅರ್ಥ ಮಾಡಿಕೊಂಡಿದ್ದಾರೆ. ಕೆಪಿಎಸ್‌ಸಿಯ ಮೇಲೆ ಅಕ್ರಮಗಳ ದೂರು ಹೆಚ್ಚಾದಾಗ ಈ ಚಿಲಯಾನೆಯನ್ನು ಮುಚ್ಚಬೇಕು ಎಂಬ ಮಾತುಗಳು ಬಂದವು. ಆದರೆ ಅದು ಕಾರ್ಯರೂಪಕ್ಕೆ ಬರಲಿಲ್ಲ. 2011ರ ಕೆಪಿಎಸ್ ನೇಮಕ ಹಗರಣ ಹೊರಬಂದಾಗ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಎಸ್‌ಸಿಗೆ ಕಾಯಕಲ್ಪ ನೀಡುವ ಉದ್ದೇಶದಿಂದ ಹೋಟಾ ಸಮಿತಿ ರಚಿಸಿದರು. ಹೋಟಾ ಸಮಿತಿ 2014ರಲ್ಲಿ ಅಧ್ಯಯನ ನಡೆಸಿ ಆಯೋಗದ ಸಮಗ್ರ ಸುಧಾರಣೆಗೆ ವರದಿ ಸಲ್ಲಿಸಿತು. ಆದರೆ ಸಮಿತಿಯ ಶಿಫಾರಸುಗಳನ್ನು ಪೂರ್ಣ ಪ್ರಮಾಣದಲ್ಲಿ ಸರಕಾರಗಳು ಜಾರಿಗೊಳಿಸಲಿಲ್ಲ. ಅರ್ಹರ ನೇಮಕಕ್ಕಾಗಿ ಸೂಕ್ತ ಪರೀಕ್ಷೆ, ಪಾರದರ್ಶಕ ನೇಮಕ ವ್ಯವಸ್ಥೆ, ಕಾಲಕ್ಕೆ ತಕ್ಕಂತೆ ನೇಮಕ ಹಾಗೂ ವರ್ಗ ಇವೆಲ್ಲವನ್ನೂ ನಡೆಸುತ್ತ ಬಂದಿರುವ ಕೇಂದ್ರ ಲೋಕಸೇವಾ ಆಯೋಗವನ್ನು ಇದರೊಂದಿಗೆ ತುಲನೆ ಮಾಡಬಹುದು.

ಪ್ರಶ್ನೆಪತ್ರಿಕೆ ಅಕ್ರಮ ಎಸಗಿದವರಿಗೆ, ಅಕ್ರಮಗಳನ್ನೇ ಕೆಲಸ ಮಾಡಿಕೊಂಡು ಇಲ್ಲಿ ಬೇರುಬಿಟ್ಟಿರುವ ಸಿಬ್ಬಂದಿಗೆ ವಿಚಾರಣೆ ನಡೆದು ಶಿಕ್ಷೆ ಆಗಬೇಕು. ಪಾರದರ್ಶಕ ಪರೀಕ್ಷೆ ನಡೆದು ಅರ್ಹರ ನೇಮಕವಾಗಬೇಕು. ಕೆಪಿಎಸ್‌ಸಿ ಸಿಬ್ಬಂದಿಯನ್ನು ಪ್ರತಿ ಎರಡು ವರ್ಷಕ್ಕೊಮ್ಮೆ ಬದಲಾಯಿಸಬೇಕು. ಇದೆಲ್ಲದರಲ್ಲಿ ರಾಜಕಾರಣಿಗಳ ಲಾಬಿ ನಡೆಯದಂತೆ ಬಿಗಿಯಾದ ಕಟ್ಟುನಿಟ್ಟು ಕಾಯ್ದುಕೊಳ್ಳುವುದು ಅಗತ್ಯ. ಇಲ್ಲವಾದರೆ ಈ ಕಳಂಕ ನಿರಂತರವಾಗಿರಲಿದೆ.